**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಆರನೇ ಅಧಿವೇಶನ**

# ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 01)**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು (2000ರ ಕರ್ನಾಟಕ ಅಧಿನಿಯಮ 28) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**–(1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.**– ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ರ ಕರ್ನಾಟಕ ಅಧಿನಿಯಮ 28) 4ನೇ ಪ್ರಕರಣದ (ಇಇ) ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಇಇಇ) ಐದು ಲಕ್ಷ ರೂಪಾಯಿಗಳಿಗೆ ಮೀರದ ಮೌಲ್ಯದ ಕುಡಿಯುವ ನೀರಿನ ಸ್ಕೀಮುಗಳ ವಿದ್ಯುದಿಕರಣದ ಮೂಲ ಸೌಲಭ್ಯ ಕಾಮಗಾರಿಗಳಿಗಾಗಿ, ರಾಜ್ಯದ ಸಂಚಿತ ನಿಧಿಯಿಂದ ಅನುದಾನವನ್ನು ಸ್ವೀಕರಿಸುವ ಸಂಗ್ರಹಣಾ ಘಟಕದ ಮೂಲಕ ಸಂಗ್ರಹಣೆಯನ್ನು ಮಾಡಲಾಗಿದ್ದ ಸಂದರ್ಭದಲ್ಲಿ;"

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಐದು ಲಕ್ಷ ರೂಪಾಯಿಗಳಿಗೆ ಮೀರದ ಮೌಲ್ಯದ ಕುಡಿಯುವ ನೀರಿನ ಸ್ಕೀಮುಗಳ ವಿದ್ಯುದೀಕರಣದ ಮೂಲ ಸೌಲಭ್ಯ ಕಾಮಗಾರಿಗಳಿಗಾಗಿ, ರಾಜ್ಯದ ಸಂಚಿತ ನಿಧಿಯಿಂದ ಅನುದಾನವನ್ನು ಸ್ವೀಕರಿಸುವ ಸಂಗ್ರಹಣಾ ಘಟಕದ ಮೂಲಕ ಸಂಗ್ರಹಣೆಯನ್ನು ಮಾಡಲಾಗಿದ್ದ ಸಂದರ್ಭದಲ್ಲಿ, ಅದನ್ನು ಅಧಿನಿಯಮದ ಅಧ್ಯಾಯ–II ರ ಉಪಬಂಧಗಳ ಅನ್ವಯಿಕೆಯಿಂದ ವಿನಾಯಿತಿಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ**

**(2000ರ ಕರ್ನಾಟಕ ಅಧಿನಿಯಮ 28) ಉದ್ಧೃತ ಭಾಗ**

Xx xx xx

**4. ಅನ್ವಯಿಸುವಿಕೆಗೆ ಅಪವಾದಗಳು.–** ಅಧ್ಯಾಯ IIರ ಉಪಬಂಧಗಳು,–

Xx xx xx

(ಇಇ) ಸರಕುಗಳನ್ನು ಅಥವಾ ಸೇವೆಗಳನ್ನು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ರಚಿತವಾದ ಗ್ರಾಮಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗಳು, ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ರಚಿತವಾದ ಪಟ್ಟಣ ಪುರಸಭೆಗಳು ಅಥವಾ ಪಟ್ಟಣ ಪಂಚಾಯತಿಗಳು ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ,–

(i) ಯಾವುವುಗಳ ಸಂಗ್ರಹಣೆಯ ಮೌಲ್ಯವು ಎರಡು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಆ ಕಿರು ನೀರು ಸರಬರಾಜು ಯೋಜನೆಯ ಅನುಷ್ಠಾನದ ಅಥವಾ ಶಾಲಾಕೊಠಡಿಗಳ ನಿರ್ಮಾಣದ ಉದ್ದೇಶಕ್ಕಾಗಿ; ಮತ್ತು

(ii) ಯಾವುವುಗಳ ಸಂಗ್ರಹಣೆಯ ಮೌಲ್ಯವು ಒಂದು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಅಂಥ ಇತರೆ ಉದ್ದೇಶಗಳಿಗಾಗಿ,–

– ಸಂಗ್ರಹಣೆ ಮಾಡಲಾಗಿದ್ದಲ್ಲಿ.

Xx xx xx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 12ನೇ ಫೆಬ್ರವರಿ, 2015

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**SIXTH SESSION**

# THE KARNATAKA TRANSPARENCY IN PUBLIC PROCUREMENTS (AMENDMENT) BILL, 2015

**(L.A. Bill No. 01 of 2015)**

A Bill further to amend the Karnataka Transparency in Public Procurements Act, 1999.

Whereas it is expedient further to amend the Karnataka Transparency in Public Procurements Act, 1999 (Karnataka Act 28 of 2000) for the purposes hereinafter appearing;

Be it enacted by the Karnataka State Legislature in the Sixty sixth year of the Republic of India as follows:-

**1. Short title and commencement.-** (1) This Act may be called the Karnataka Transparency in Public Procurements (Amendment) Act, 2015.

(2) It shall come into force at once.

**2. Amendment of section 4.-** In the Karnataka Transparency in Public Procurements Act, 1999 (Karnataka Act 28 of 2000), in section 4, after sub-section (ee), the following shall be inserted, namely:-

"(eee) Where the procurement is by the procurement entity receiving grant from the consolidated fund of the state, in case of Infrastructure works of electrification of drinking water schemes the value of which does not exceed rupees five lakhs;"

## STATEMENT OF OBJECTS AND REASONS

It is considered necessary to amend the Karnataka Transparency in Public Procurements Act, 1999 to exempt, the procurements by the procurement entity receiving grant from the consolidated fund of the State in case of infrastructure works of electrification of drinking water scheme the value of which does not exceed rupees five lakhs from the application of provisions of Chapter-II of the Act.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**SIDDARAMAIAH**
Chief Minister

**P. OMPRAKASHA**
Secretary
Karnataka Legislative Assembly

## ANNEXURE

**Extract of The Karnataka Transparency in Public Procurements Act, 1999. (Karnataka Act 29 of 2000)**

**xx xx xx**

**4. Exceptions to applicability.-** The provisions of Chapter II shall not apply to Procurement of goods and services,-

**xx xx xx**

(ee) where the procurement of goods or services is by the Grama Panchayats and Taluk Panchayats constituted under the Karnataka Panchayat Raj Act, 1993, Town Municipal Councils or Town Panchayats constituted under the Karnataka Municipalities Act, 1964 or Urban Development Authorities constituted under the Karnataka Urban Development Authorities Act, 1987,-

(i) for the purpose of implementing mini water supply scheme or construction of school rooms and the value of such procurement does not exceed rupees two lakhs; and

(ii) for other purposes and the value of such procurement does not exceed rupees one lakh.

**xx xx xx**

Government Press, Vikasa Soudha, Bangalore, P7, W.D. , Copies 750, 12th February, 2015